ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 06-04-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ವಿಶ್ವ ಆರೋಗ್ಯ ದಿನ, ಲಸಿಕೆ ನೀಡಿಕೆಗೆ ಚಾಲನೆ ಹಾಗೂ 3ನೇ ಹಂತದ ಇಂದ್ರಧನುಷ್ ಅಭಿಯಾನದ ಚಾಲನೆ:<br><br>ಉದ್ಘಾಟನೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿ,<br>ಕರ್ನಾಟಕ ಸರ್ಕಾರ<br><br>ಮುಖ್ಯ ಅತಿಥಿಗಳು:<br><br>ಯು.ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.<br><br>ಶರಣಪ್ರಕಾಶ್ ಪಾಟೀಲ್,<br>ವೈದ್ಯಕೀಯ ಶಿಕ್ಷಣ ಸಚಿವರು.<br><br>ಅಧ್ಯಕ್ಷತೆ:<br><br>ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ ಹಾಗೂ ಹಜ್ ಖಾತೆ ಸಚಿವರು. | **07-04-2016**<br>ಗುರುವಾರ<br>ಬೆಳಿಗ್ಗೆ<br>**10-30** ಗಂಟೆಗೆ | ಔತಣ ಸಭಾಂಗಣ,<br>ವಿಧಾನಸೌಧ,<br>ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಬೆಂಗಳೂರು – ಮೈಸೂರು ನಡುವಿನ ಆರು ಪಥದ ರಸ್ತೆ ನಿರ್ಮಾಣಕ್ಕೆ ಆಗಸ್ಟ್ ತಿಂಗಳಲ್ಲಿ ಚಾಲನೆ

ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)

ಬೆಂಗಳೂರು–ಮೈಸೂರು ನಡುವೆ ಆರು ಪಥಗಳ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ನಿರ್ಮಾಣದ ಕೆಲಸಕ್ಕೆ ಆಗಸ್ಟ್ ತಿಂಗಳಲ್ಲಿ ಚಾಲನೆ ನೀಡಲಾಗುವುದು ಎಂದು ಲೋಕೋಪಯೋಗಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರು ತಿಳಿಸಿದರು.

ರಸ್ತೆಗಳ ಸ್ಥಿತಿಗತಿ ಹಾಗೂ ಗುಣಮಟ್ಟ ತಿಳಿಯುವ ಆಧುನಿಕ ತಂತ್ರಜ್ಞಾನದಿಂದ ಕೂಡಿದ ರಾಮ್ಡೋಸ್ ಮತ್ತು "ಪಾಲಿಂಗ್ ವೇಜ್ ಡಿಫ್ಲೆಕ್ಟೋ ಮೀಟರ್ ಯಂತ್ರಗಳಿಗೆ ವಿಧಾನಸೌಧದಲ್ಲಿ ಇಂದು ಚಾಲನೆ ನೀಡಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಬೆಂಗಳೂರು ಮೈಸೂರು ಹೆದ್ದಾರಿ ನಿರ್ಮಾಣದ ಕೆಲಸಕ್ಕೆ ಭೂ ಸ್ವಾಧೀನಕ್ಕೆ 2400 ಕೋಟಿ ರೂ. ಬೇಕಾಗಿದ್ದು, ರಸ್ತೆ ನಿರ್ಮಾಣಕ್ಕೆ 37.00 ಕೋಟಿ ರೂ. ವೆಚ್ಚ ತಗಲುಲಿದೆ ಎಂದು ಡಾ. ಹೆಚ್. ಸಿ. ಮಹದೇವಪ್ಪ ಅವರು ಒಟ್ಟು 130 ಕಿಲೋ ಮೀಟರ್ ಉದ್ದದ ರಸ್ತೆ ಇದಾಗಿದ್ದು, ಮುಂದೆ ಮೇ ತಿಂಗಳಲ್ಲಿ ಟೆಂಡರ್ ಕರೆಯಲು ತೀರ್ಮಾನಿಸಿದ್ದು ಆಗಸ್ಟ್ ತಿಂಗಳಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ದೇಶದಲ್ಲೇ ಮೊದಲ ಬಾರಿಗೆ ರಸ್ತೆಗಳ ಗುಣಮಟ್ಟ ತಿಳಿಯುವ ಹಾಗೂ ರಸ್ತೆ ಸುರಕ್ಷತೆ ಮಾಹಿತಿ ಪಡೆಯುವ ಸಲುವಾಗಿ ಎರಡು ನೂತನ ಯಂತ್ರಗಳನ್ನು ಬಳಸುತ್ತಿದ್ದು, ಈ ಯಂತ್ರಗಳನ್ನು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಹಣಕಾಸಿನ ನೆರವಿನಿಂದ ಈ ಯಂತ್ರಗಳನ್ನು ನ್ಯೂಜಿಲೆಂಡ್ ದೇಶದಿಂದ ತರಿಸಲಾಗಿದೆ ಎಂದ ಹೆಚ್.ಸಿ. ಮಹದೇವಪ್ಪ ಅವರು ಈ ಯಂತ್ರಗಳ ಸಹಾಯದಿಂದ ಈಗಾಗಲೇ ರಾಜ್ಯದಲ್ಲಿ ಸುಮಾರು 500 ಕಿಲೋ ಮೀಟರ್ ರಸ್ತೆಯನ್ನು ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಲಾಗಿದೆ. ಈ ಎರಡು ಯಂತ್ರಗಳ ಬೆಲೆ 5 ಕೋಟಿ ರೂ. ಆಗಿದೆ ಎಂದು ಇದೇ ಸಂದರ್ಭದಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಬಾಬು:ಕೆಪಿಪಿ:ಜಿಪಿಆರ್

# ಕಚೇರಿ ಸ್ಥಳಾಂತರ

ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)

ಬೆಂಗಳೂರಿನ ಕ್ರೆಸೆಂಟ್ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿದ್ಯುತ್ ಪರಿವೀಕ್ಷಣಾಲಯ ಕೇಂದ್ರ ಕಚೇರಿಯನ್ನು ಏಪ್ರಿಲ್ 11 ರಿಂದ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ನಿರ್ಮಾಣ ಭವನ (ಒರಿಯನ್ ಮಹಲ್ ಎದುರು) 2ನೇ ಮಹಡಿ, ಅಂಚೆ ಪೆಟ್ಟಿಗೆ ಸಂಖ್ಯೆ 5148, ಡಾ. ರಾಜ್‌ಕುಮಾರ್ ರಸ್ತೆ, ಒಂದನೇ ಬ್ಲಾಕ್, ರಾಜಾಜಿನಗರ ಬೆಂಗಳೂರು – 560 010 ಇಲ್ಲಿಗೆ ಸ್ಥಳಾಂತರಿಸಲಾಗುತ್ತಿದೆ. ಇನ್ನು ಮುಂದೆ ವಿದ್ಯುತ್ ಪರಿವೀಕ್ಷಣಾಲಯದ ಕೇಂದ್ರ ಕಚೇರಿಯೊಡನೆ ವ್ಯವಹರಿಸುವವರು ಮೇಲ್ಕಂಡ ಕಚೇರಿ

ವಿಳಾಸದಲ್ಲಿ ವ್ಯವಹರಿಸುವಂತೆ ರಾಜ್ಯ ಮುಖ್ಯ ವಿದ್ಯುತ್ ಪರಿವೀಕ್ಷಕರಾದ ಡಿ.ಹೆಚ್. ಬಸವರಾಜು ಅವರು ತಿಳಿಸಿದ್ದಾರೆ.

ಬಾಬು:ಜಿಪಿಆರ್